a)	Posts sanctioned under DPEP (Mandya-60, Kolar-60, Raichur & Belgaum)	-	530
b)	Posts sanction during the year 95-96		5000
c)	Posts sanctioned under Operation Black Board scheme 5th and 6th phases.	-	3196
	TOTAL	-	18700

(ಮಂಡಿಸಲಾಯಿತು)

ಅಧ್ಯಕ್ಷರ ತೀರ್ಪುಗಳು

ಅಧ್ಯಕ್ಷರು : ಇದರ ಜೊತೆಗೆ 2 ರೂಲಿಂಗ್ಸ್ ಇವೆ. ಅವುಗಳನ್ನು ಕೊಟ್ಟು ಬಿಡುತ್ತೇನೆ. ಅನಂತರ ಮಾನ್ಯ ಮುಖ್ಯ ಮಂತ್ರಿಗಳಿಂದ ಉತ್ತರ ಪ್ರಾರಂಭವಾಗುತ್ತದೆ.

ಸದನದ ಸದಸ್ಯರಾದ ಶ್ರೀ ಹೆಚ್.ಡಿ. ರೇವಣ್ಣನವರ ಮೇಲೆ ಮಾಡಿರುವ ಆರೋಪದ ಬಗ್ಗೆ

ಸನ್ಮಾನ್ಯ ವಿರೋಧ ಪಕ್ಷಕ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ದಿನಾಂಕ 7-8-1995ರಂದು ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡ ಇವರ ನೇತೃತ್ವದ ಸರ್ಕಾರದ ವಿರುದ್ಧ ಮಂಡಿಸಿರುವ ಅವಿಶ್ವಾಸ ನಿರ್ಣಯವನ್ನು ಪ್ರತಿಪಾದಿಸಿ ಮಾತನಾಡುತ್ತಿದ್ದ ಸಂದರ್ಭದಲ್ಲಿ ಸನ್ಮಾನ್ಯ ಶ್ರೀ ಹೆಚ್.ಡಿ ದೇವೇಗೌಡ ಹಾಗೂ ಸದನದ ಸದಸ್ಯರಾದ ಶ್ರೀ ಹೆಚ್.ಡಿ. ರೇವಣ್ಣನವರನ್ನು ಕುರಿತಂತೆ ಒಂದು ಗುರುತರವಾದ ಆರೋಪವನ್ನು ಮಾಡಿರುತ್ತಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಜನತಾ ದರ್ಶನದ ಪ್ರವಾಸಕ್ಕೆ ಹೊರಟಿದ್ದಾಗ ಮುಖ್ಯಮಂತ್ರಿಗಳ ಕಛೇರಿ ಬಾಗಿಲು ತೆರೆದಿದೆ ಎಂದು ಒಳಗೆ ನೋಡಿದರೆ ಸನ್ಮಾನ್ಯ ರೇವಣ್ಣನವರು ಮುಖ್ಯಮಂತ್ರಿಗಳ ಕುರ್ಚಿಯಲ್ಲಿ ಕುಳಿತುಕೊಂಡು ದೂರವಾಣಿ ಮೂಲಕ ಮತನಾಡುತ್ತಿದ್ದಾಗ ಇದನ್ನು ನೋಡಿ ಆಕ್ರೋಶಗೊಂಡು, ಆಶ್ಚರ್ಯಪಟ್ಟು, ಅವರ ಜವಾನನ್ನು ಯಾರು ಬೀಗ ಬಾಗಿಲು ತೆಗೆದನೋ ಅವನನ್ನು ಸಸ್ಪೆಂಡ್ ಮಾಡಿದ್ದಾರೆ ಎಂಬುದಾಗಿ ಶ್ರೀ ಬಿ.ಎಸ್. ಯಡಿಯೂರಪ್ಪ ಆರೋಪಿಸಿರುತ್ತಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡರು ಹಾಗೂ ಶ್ರೀ ಹೆಚ್.ಡಿ. ರೇವಣ್ಣನವರು ಈ ಆರೋಪವನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ ಹಾಗೂ ಶ್ರೀ ಹೆಚ್.ಡಿ ದೇವೇಗೌಡರು ಮಾತನಾಡಿ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಈ ಆರೋಪವನ್ನು ದಾಖಲೆಗಳ ಸಮೇತ ಸಾಭೀತತು ಮಾಡಬೇಕೇಂದು ಆಗ್ರಹಪಡಿಸಿರುತ್ತಾರೆ.

ದಿನಾಂಕ 8-8-1995 ರಂದು ತಮ್ಮ ಭಾಷಣವನ್ನು ಮುಂದುವರೆಸಿದ ಶ್ರೀ ಬಿ.ಎಸ್. ಯಡಿಯೂರಪ್ಪ ನಿನ್ನೆ ಪತ್ರಿಕಾ ವರದಿ ಮತ್ತು ಇತರ ವರದಿ ಮತ್ತು ದಾಖಲೆಗಳ ಆಧಾರದ ಮೇಲೆ ನಾನು ಮಾತಾನಾಡಿದ್ದು, ಮಾನ್ಯ ಸಭಾ ನಾಯಕರಿಗಾಗಲೀ, ಇತರ ಯಾರಿಗೇ ಆಗಲಿ ನೋವು ಆಗಿದ್ದರೆ, ಅದು ನನ್ನ ಉದ್ದೇಶವಾಗಿರಲಿಲ್ಲ.

ಅದಕ್ಕಾಗಿ ನನ್ನ ಮನಸ್ಸಿಗೂ ನೋವು ಆಗಿದೆ. ವಿಷಾದವು ಆಗಿದೆ. ತಾವುಗಳು ನಿನ್ನೆ ಕೇಳಿದಂತೆ ನನ್ನಲ್ಲಿರುವ ದಾಖಲೆಗಳನ್ನು ಕಳುಹಿಸಿಕೊಡುತ್ತಾ ಇದ್ದೇನೆ ಎಂದು ತಿಳಿಸಿರುತ್ತಾರೆ.

ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡರ ವಿರುದ್ಧ ಮಾಡಿರುವ ಆರೋಪಗಳನ್ನು ಸಾಬೀತುಗೊಳಿಸಲು ದಾಖಲೆಗಳನ್ನು ಒದಗಿಸಿರುವುದಾಗಿ ದಿನಾಂಕ 9-8-95ರಂದು ಪ್ರಕಟಿತವಾದ ಅನೇಕ ವೃತ್ತ ಪತ್ರಿಕೆಗಳಲ್ಲಿ ವರದಿಯಾಗಿರುವುದು ಕಂಡುಬಂದಿರುತ್ತದೆ. ಇದಲ್ಲದೆ ದಿನಾಂಕ 9-8-95ರಂದು ಸನ್ಮಾನ್ಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಈ ವಿಷಯವನ್ನು ಪ್ರಸ್ತಾಪ ಮಾಡಿ ಮಾತನಾಡುತ್ತಾ, ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಒದಗಿಸಿರುವ ದಾಖಲೆಗಳನ್ನು ಸದನದ ಗಮನಕ್ಕೆ ಬಹಿರಂಗಪಡಿಸುವಂತೆ ನನ್ನಲ್ಲಿ ಅರಿಕೆ ಮಾಡಿರುತ್ತಾರೆ. ವೃತ್ತಪತ್ರಿಕೆಗಳಲ್ಲಿ ಈ ವಿಷಯದ ಬಗ್ಗೆ ವ್ಯಾಪಕವಾಗಿ ಪ್ರಚಾರ ಬಂದಿರುವುದರಿಂದ ಸದನದ ಎಲ್ಲಾ ಸದಸ್ಯರ ಮನಸ್ಸಿನಲ್ಲಿ ಮೂಡಿರಬಹುದಾದ ಕುತೂಹಲ ಅಥವಾ ತಪ್ಪು ಅಭಿಪ್ರಾಯಗಳನ್ನು ಸರಿಪಡಿಸುವ ದೃಷ್ಟಿಯಿಂದ ನಾನು ಈ ಅಂಶಗಳ ಬಗ್ಗೆ ತೀರ್ಪನ್ನು ನೀಡುವುದು ಸಮಂಜಸವೆನಿಸುತ್ತದೆ.

ಸನ್ಮಾನ್ಯ ಶ್ರೀ ಯಡಿಯೂರಪ್ಪನವರು ಸನ್ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ ಮಾಡಿರುವ ಆರೋಪಗಳ ಬಗ್ಗೆ ವಿಷಾದ ವ್ಯಕ್ತಪಡಿಸುವ ಜೊತೆಗೆ ಆರೋಪಗಳನ್ನು ಸಾಬೀತುಗೊಳಿಸುವ ಬಗ್ಗೆ ಪುಷ್ಠೀಕರಿಸುವ ಆಧಾರಗಳನ್ನು ಒದಗಿಸಿರುವಂತಹ ದ್ವಂದಾರ್ಥ ಹೊರ ಹೊಮ್ಮುತ್ತಿದ್ದರಿಂದ ದಾಖಲೆಗಳನ್ನು ನೇರಗೊಳಿಸುವ ದೃಷ್ಠಿಯಿಂದ ಈ ಕೆಳಕಂಡ ಅಂಶಗಳನ್ನು ಸ್ಪಷ್ಟಗೊಳಿಸುವ ಅವಶ್ಯಕತೆಯಿರುತ್ತದೆ.

ಸನ್ಮಾನ್ಯ ಶ್ರೀ ಯಡಿಯೂರಪ್ಪವರು ತಮ್ಮ ಆರೋಪಗಳನ್ನು ಸಾಬೀತುಗೊಳಿಸುವ ಬಗ್ಗೆ ನನಗೆ ಒದಗಿಸಿರುವ ದಾಖಲೆಗಳನ್ನು ನಾನು ಪರೀಶಿಲಿಸಿರುತ್ತೇನೆ. ಸನ್ಮಾನ್ಯ ಶ್ರೀ ಯಡಿಯೂರಪ್ಪನವರು ಎರಡು ವೃತ್ತಪತ್ರಿಕೆಗಳ ಜೆರಾಕ್ಸ್ ಪ್ರತಿಗಳನ್ನು ಮಾತ್ರ ನನಗೆ ಒದಗಿಸಿಕೊಟ್ಟಿರುತ್ತಾರೆ. ಈ ಸದನದಲ್ಲಿ ಈಗಾಗಲೇ ಅನೇಕ ಸಂದರ್ಭಗಳಲ್ಲಿ ಇಂತಹ ಪ್ರಸಂಗಗಳು ಒದಗಿಬಂದಾಗ ಸನ್ಮಾನ್ಯ ಸದಸ್ಯರ ವಿರುದ್ಧ ಆರೋಪಗಳನ್ನು ಮಾಡುವಾಗ ಕಾನೂನಿನಲ್ಲಿ ಅಳವಡಿಸಿರುವಂತೆ ಸೂಕ್ತ ದಾಖಲೆಗಳನ್ನು ಆಧರಿಸಿಕೊಂಡು ಮಾತನಾಡಬೇಕೆಂತಲೂ ಕೇವಲ ವೃತ್ತ ಪತ್ರಿಕೆಗಳ ವರದಿಗಳನ್ನಾಧರಿಸಿ ಆರೋಪಗಳನ್ನು ಮಾಡುವುದು ಸಾಧುವಲ್ಲ ಎಂದು ಪದೇ ಪದೇ ವಿಧಿಸಲಾಗಿದೆ.

ಈ ಆರೋಪಗಳು ಈ ಸದನದ ಸಭಾನಾಯಕರ ಕುಟುಂಬ ವರ್ಗಕ್ಕೆ ಸಂಬಂಧಪಟ್ಟಿದ್ದರೂ ಸಹ ಅವರ ಮಗ ಈ ಸಸದನದ ಸದಸ್ಯನಾಗಿರುವುದರಿಂದ ನಾನು ಕೆಲವು ಅಂಶಗಳನ್ನು ಉಲ್ಲೇಖಿಸಿ ತೀರ್ಪನ್ನು ನೀಡಬೇಕಾಗಿದೆ. ಈಗಾಗಲೇ ಉಲ್ಲೇಖಿಸಿರುವಂತೆ ಸನ್ಮಾನ್ಯ ಸಸದಸ್ಯರು ಈ ಸದನಸ ಇತರೆ ಸದಸ್ಯರ ವಿರುದ್ಧ ಆರೋಪಗಳನ್ನು ಮಾಡುವಾಗ ಕೇವಲ ವೃತ್ತ ಪತ್ರಕೆಗಳ ವರದಿಗಳನ್ನು ಆಧಾರಪಡಿಸಿ ಆರೋಪಗಳನ್ನು ಮಾಡುವುದು ಸಿಂಧುವಲ್ಲ

ಹಾಗೂ ಆ ರೀತಿ ಮಾಡಿದ್ದೇ ಆದಲ್ಲಿ ಸದಸ್ಯರು ವೃತ್ತ ಪತ್ರಿಕೆಗಳ ವರದಿಗಳ ಸತ್ಯಾಸತ್ಯತೆಯನ್ನು ಧೃಡಪಡಿಸುವ ಸಂಪೂರ್ಣ ಜವ್ವಾರಿಯನ್ನು ಹೊರಬೇಕಾಗುತ್ತದೆ. ಈ ರೀತಿ ಕೇವಲ ವೃತ್ತ ಪತ್ರಿಕೆಗಳ ವರದಿಗಳನ್ನೇ ಆಧಾರವಾಗಿಟ್ಟು ಕೊಂಡು ಸದಸ್ಯರ ವಿರುದ್ಧ ಗಂಭೀರ ಆರೋಪಗಳನ್ನು ಮಾಡುವುದು ಸಾಧುವಲ್ಲ ಎಂದು ಇನ್ನೊಮ್ಮೆ ಒತ್ತಿ ಹೇಳಬಯಸುವೆ. ಈ ಸದನದ ಸಾರ್ವಭೌಮತ್ವವನ್ನು ಎತ್ತಿ ಹಿಡಿದು ಸತ್‌ಸಂಪ್ರದಾಯಗಳನ್ನು ಪಾಲಿಸಿಕೊಂಡು ಹೋಗುವುದರಲ್ಲಿ ಎಲ್ಲರ ಸಹಕಾರವನ್ನು ಬಯಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ನನಗೆ ಒಂದು ಅನುಮಾನ ಬಂದಿದೆ. ಅವು ಯಾವ ವೃತ್ತ ಪತ್ರಿಕೆಗಳು ಎಂಬುದನ್ನು ದಯವಿಟ್ಟು ತಿಳಿಸಬೇಕು.

ಅಧ್ಯಕ್ಷರು : ಅವರು ಕೊಟ್ಟಿರತಕ್ಕದ್ದು ಜೆರಾಕ್ಸ್ ಪ್ರತಿಗಳು. ವೃತ್ತ ಪತ್ರಿಕೆಗಳು ಎಂದರೆ ವಾರಪತ್ರಿಕೆ ಮತ್ತು ಲಂಕೇಶ್ ಪತ್ರಿಕೆ.

ಶ್ರೀ ಹೆಚ್.ಡಿ. ದೇವೇಗೌಡ : ತಾವು ತಾರೀಖಿನ್ನು ಹೇಳಿದರೆ ಒಳ್ಳೆಯದು. ಏಕೆಂದರೆ, ನಮ್ಮ ಜನತಾ ಸಂದರ್ಶನ ಶುರುವಾದುದು 3ನೇ ತಾರೀಖಿನಿಂದ

ಅಧ್ಯಕ್ಷರು : ಕೊಡುತ್ತೇನೆ. ಈಗ ಇನ್ನೊಂದು ರೂಲಿಂಗ್ ಇದೆ.

ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ್ ಖಾತೆಯ ರಾಜ್ಯ ಸಚಿವರ ಮೇಲೆ ಮಾಡಿರುವ ಅಪಾದನೆಗಳು.

ದಿನಾಂಕ 08-08-1995 ರಂದು ಶ್ರೀ ದೇವೇಗೌಡರ ನೇತೃತ್ವದ ಮಂತ್ರಿಮಂಡಲದಲ್ಲಿ ಅವಿಶ್ವಾಸ ನಿರ್ಣಯ ಸೂಚನೆಯ ಬಗ್ಗೆ ವಿರೋಧ ಪಕ್ಷದ ಸನ್ಮಾನ್ಯ ನಾಯಕರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮಾತನಾಡುತ್ತಾ, ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ್ ಖಾತೆಯ ರಾಜ್ಯ ಸಚಿವರಾದ ಶ್ರೀ ಆರ್. ರೋಷನ್ ಬೇಗ್ ಅವರ ವಿರುದ್ಧ ಕೆಲವೊಂದು ಗಂಭೀರವಾದ ಅಪಾದನೆಗಳನ್ನು ಮಾಡಿದರು. ಕಿಮಿನಲ್ ಹಿನ್ನಲೆ ಹೊಂದಿರುವರೆಂದು ಆರೋಪಿಸಲಾಗಿರುವ ವ್ಯಕ್ತಿಗಳೊಂದಿಗೆ ಶ್ರೀ ಆರ್. ರೋಷನ್ ಬೇಗ್ ಅವರು ನಿಕಟ ಸಂಪರ್ಕ ಹೊಂದಿದ್ದರೆಂಬುತದೇ ಆರೋಪದ ಪ್ರಧಾನ ವಿಷಯ. ಮಾನ್ಯ ವಿರೋಧ ಪಕ್ಷದ ನಾಯಕರು ಶ್ರೀ ಆರ್. ರೋಷನ್ ಬೆ ಗ್ ಅವರ ವಿರುದ್ಧ ಮಾಡಲಾದ ಆಪಾದನೆಗಳನ್ನು ಸಮರ್ಥಿಸುತ್ತಾ ವಿಡಿಯೋ ಕ್ಯಾಸೇಟ್ಟೊಂದನ್ನು ಸಹ ನನಗೆ ಕಳುಹಿಸಿ ಕೊಟ್ಟಿರುತ್ತಾರೆ.

ವಿಧಾನ ಸಭೆಯ ವಿರೋಧ ಪಕ್ಷದ ಸನ್ಮಾನ್ಯ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ನೀಡಿದ ವಿಡಿಯೋ ಕ್ಯಾಸೇಟ್ಟನ್ನು ನಾನು ಖುದ್ದೀಗಿ ನೋಡಿದ್ದೇನೇ. ಈ ಕ್ಯಾಸೆಟ್, ಎಸ್.ಟಿ.ಡಿ : ಐ.ಎಸ್.ಡಿ. ಬೂತೊಂದರ ಉದ್ಘಾಟನಾ ಸಮಾರಂಭವೊಂದಕ್ಕೆ ಸಂಬಂಧಿಸಿದ್ದಾಗಿದೆ. ಶ್ರೀಮತಿ ಮತ್ತು ಶ್ರೀ ಅಹಮದ್‌ರವರ ಹೆಸರಿನಲ್ಲಿ ಕಟ್ಟಿರುವ ಬ್ಯಾನರ್‌ಗಳು ಇವೆ. ಕ್ಯಾಸೆಟ್‌ನಲ್ಲಿ, ತೋರಿಸಿರುವಂತೆ ಸಮಾಜ್ ಮಾಡಲಿಕ್ಕಾಗಿ ಬಹು ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಪಾಲ್ಗೊಂಡಿರುವುದಲ್ಲದೆ ಇತರ ಅನೇಕ ಅತಿಥಿಗಳು ಸಹ ಆಹ್ವಾನಿತಗೊಂಡಿರುವುದು ಇಡೀ ಕ್ಯಾಸೆಟ್ ಅನ್ನು ವೀಕ್ಷಿಸಿದಾಗ ತಿಳಿದು ಬರುತ್ತದೆ.

ನನಗೆ ವೈಯಕ್ತಿಕವಾಗಿ ಚೆನ್ನಾಗಿ ಗೊತ್ತಿರುವ ಮೂರು ಮಂದಿ ಗಣ್ಯ ವ್ಯಕ್ತಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಅಂಶವನ್ನು ಉಲ್ಲೇಖಿಸಬಯಸುತ್ತೇನೆ.

1. ಶ್ರೀ ರಾಜಣ್ಣ ಪ್ರಸ್ತುತ ಸದನದ ಸನ್ಮಾನ್ಯ ಸದಸ್ಯರು, ಭಾರತಿ ನಗರ ಮತ ಕ್ಷೇತ್ರದಿಂದ ಪ್ರತಿನಿಧಿತದರು, ಜನತಾ ದಳ ಪಕ್ಷ.
2. ಶ್ರೀ ವೆಂಕಟಲಕ್ಷ್ಮಯ್ಯ, ಬೆಂಗಳೂರು ನಗರದ ಮಾಜಿ ಕಾರ್ಪೋರೇರ್ಟರ್, ಬಿಜೆ.ಪಿ. ಪಕ್ಷ ಪ್ರತಿನಿಧಿತರು.
3. ಶ್ರೀ ಆರ್. ರೋಷನ್ ಬೇಗ್ ಸನ್ಮಾನ್ ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ್ ಖಾತೆಯ ರಾಜ್ಯ ಸಚಿವರು.

ನಾನು ನೋಡಿದ ಹಾಗೆ ಈ ಕ್ಯಾಸೆಟ್‌ನಲ್ಲಿ, ಕಾರ್ಯ್‌ಕ್ರಮದ ಸ್ಥಳಕ್ಕೆ ಆಗಮಿಸಿ ಪರಸ್ಪರ ಅಭಿನಂದನೆಗಳನ್ನು ವಿನಿಮಯ ಮಾಡಿಕೊಂಡದ್ದಕ್ಕಷ್ಟೇ ಈ ಮೂವರು ಗಣ್ಯರ ಪಾತ್ರ ಸೀಮಿತವಾಗಿದೆ. ಅಷ್ಟೇ ಹೊರತು ಬೇರೇನೂ ಇಲ್ಲ. ಕೇವಲ ಈ